ತೆಗೆದುಕೊಂಡರೆ ಬೇರೆ ರಾಷ್ಟ್ರೀಕೃತ ಬ್ಯಾಂಕುಗಳಲ್ಲಿ ಪಡೆದಂತಹ ಸಾಲಗಳ ಬಡ್ಡಿ ಮತ್ತು ಸುಸ್ತಿ ಬಡ್ಡಿಯನ್ನಾದರೂ ಮನ್ನಾ ಮಾಡಬೇಕಾಗಿತ್ತು. ಯಾರು ಪ್ರಾಮಾಣಿಕವಾಗಿ ಬಡ್ಡಿಯನ್ನು ಕಟ್ಟಿದ್ದಾರೆ ಅವರೇನು ಪಾಪ ಮಾಡಿದ್ದರು? ಸಾಲ ಮನ್ನಾ ಯೋಜನೆ ಜಾರಿಗೆ ಬಂದಮೇಲೆ ಯಾರು ಪ್ರಾಮಾಣಿಕವಾಗಿ ಬಡ್ಡಿ ಕಟ್ಟಿದ್ದಾರೆ ಅದನ್ನು ತುಂಬಿ ಕೊಡಬೇಕಾದದ್ದು ಸರ್ಕಾರದ ಕರ್ತವ್ಯ. ಇದೊಂದು ರೈತರ ವಿರೋಧಿ ನೀತಿಯಾಗುತ್ತದೆ. ಅತಿವೃಷ್ಟಿ ಮತ್ತು ನೆರೆಹಾವಳಿ ಬಗ್ಗೆ ಯಾವುದೇ ನೀತಿಯಿಲ್ಲ, ರೈತರ ಬಗ್ಗೆ ಯಾವುದೇ ಮಾತನ್ನು ಹೇಳಲಿಲ್ಲ, ನಿಮ್ಮ ರೈತರ ವಿರೋಧಿ ನೀತಿ ಏನಿದೆ ಮತ್ತು ನೀವು ರಾಜ್ಯಪಾಲರ ಭಾಷಣದಲ್ಲಿ ಹೇಳಿರುವಂತಹ ನೀತಿ ನಿಯಮಗಳು ನಿಲುವುಗಳು ಅವುಗಳನ್ನು ಕಾರ್ಯ ರೂಪದಲ್ಲಿ ತರುವಲ್ಲಿ ಸರ್ಕಾರ ಸಂಪೂರ್ಣ ವಿಫಲವಾಗಿದೆ. ನೀವು ನ್ಯಾಯವಾಗಿ ರೈತರ ಸಾಲವನ್ನು ಮನ್ನಾ ಮಾಡಬೇಕಾಗಿತ್ತು ಅದು ನಿಮ್ಮ ಕರ್ತವ್ಯವಾಗಿತ್ತು. ನೀವೇನು ಭರವಸೆಯನ್ನು ಜನರಿಗೆ ಕೊಟ್ಟು ಚುನಾವಣೆಯಲ್ಲಿ ಗೆದ್ದು ಬಂದಿರಿ, ಆ ಆಶ್ವಾಸನೆಗಳನ್ನು ಈಡೇರಿಸುವಲ್ಲಿ ಸರ್ಕಾರ ಸಂಪೂರ್ಣ ವಿಫಲವಾಗಿದೆ ಈ ಸರ್ಕಾರದ ನೀತಿಯನ್ನು ನಾವು ಪ್ರತಿಭಟನೆ ಮಾಡಿ ಸಭಾತ್ಯಾಗ ಮಾಡುತ್ತೇವೆ.

(ಈ ಹಂತದಲ್ಲಿ ಭಾರತೀಯ ಜನತಾ ಪಕ್ಷದ ಸದಸ್ಯರು ಸಭೆಯಿಂದ ಹೊರ ನಡೆದರು)

ಶ್ರೀ ಎಂ. ವರದೇಗೌಡ : ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಗಳು ರೇಷ್ಮೆ ಕ್ಷೇತ್ರದಿಂದ ಬಂದಿರತಕ್ಕವರು. ಇವತ್ತು ರೇಷ್ಮೆ ಬೆಳೆಯತಕ್ಕವರಿಗೆ ಒಂದು ಕೆ.ಜಿ.ಗೆ 80-90 ರೂಪಾಯಿ ಬೆಲೆ ಸಿಗುತ್ತಿದೆ. ವಿದೇಶಿ ರೇಷ್ಮೆಯನ್ನು ಆಮದು ಮಾಡಿಕೊಂಡು ರೈತರಿಗೆ 200 ರಿಂದ 250 ರೂಪಾಯಿಗೆ ಒಂದು ಕೆ.ಜಿ. ಗೂಡು ಮಾರಾಟವಾಗುತ್ತಿದೆ. ಇದರ ಬಗ್ಗೆ ಏನು ಕ್ರಮವನ್ನು ಕೈಗೊಳ್ಳುತ್ತೀರಿ? ಹೊರದೇಶದಿಂದ ತರಿಸತಕ್ಕ ರೇಷ್ಮೆಗೆ ಏನಾದರೂ ನಿರ್ಬಂಧ ಹಾಕತಕ್ಕಂಥದ್ದನ್ನು ಮಾಡುತ್ತೀರಾ? ತಾವೂ ಸಹ ಅದೇ ಕ್ಷೇತ್ರದಿಂದ ಬಂದಿದ್ದೀರಿ. ಇಡೀ ಏಷ್ಯಾದಲ್ಲಿಯೇ ದೊಡ್ಡ ರೇಷ್ಮೆ ಮಾರ್ಕೆಟ್ ನಮ್ಮ ಕ್ಷೇತ್ರದಲ್ಲಿದೆ. ದಯಮಾಡಿ ಮಾನ್ಯ ಮುಖ್ಯಮಂತ್ರಿಗಳು ಇದರ ಬಗ್ಗೆ ಸವಿಸ್ತಾರವಾದ ಉತ್ತರವನ್ನು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಬಿ.ಆರ್. ಯಾವಗಲ್ : ಮಾನ್ಯ ಅಧ್ಯಕ್ಷರೆ, ರಾಜ್ಯದಲ್ಲಿ ಹಲವಾರು ಕಡೆಗಳಲ್ಲಿ ಭೂಕಂಪ, ಮಹಾಪೂರ ಮತ್ತು ಹೆಚ್ಚು ಮಳೆಯಿಂದಾಗಿ ಅನೇಕ ನದಿಗಳ ಪಕ್ಕದಲ್ಲಿರತಕ್ಕ ಹಳ್ಳಿಗಳು ಮಹಾಪೂರದಿಂದ ನಾಶವಾಗಿ ಹೋಗುವ ಪರಿಸ್ಥಿತಿ ಬಂದಿದೆ. ಈ ಪರಿಸ್ಥಿತಿ ತಮ್ಮ ಗಮನಕ್ಕೆ ಬಂದಿದೆ. ತಾವು ಸ್ವತಃ ನೋಡಿದ್ದೀರಿ. ಆ ಹಳ್ಳಿಗಳನ್ನು ಸ್ಥಳಾಂತರ ಮಾಡಿಸಬೇಕು. ಅದಕ್ಕೆ ದುಡ್ಡು ಇಲ್ಲ, ಹಿಂದಿನ ಸರ್ಕಾರದವರು ವಿಶ್ವಬ್ಯಾಂಕ್ ಯೋಜನೆಗೆ ಕಳುಹಿಸಿದ್ದೇವೆಂದು ಹೇಳಿದರು. ಆ ಹಳ್ಳಿಗಳು ಮತ್ತೆ ಮಹಾಪೂರ ಬಂದರೆ ಮಳೆ ಬಂದರೆ ಬಹಳ ತೀವ್ರತರನಾದ ಪರಿಸ್ಥಿತಿಯನ್ನು ಎದುರಿಸಬೇಕಾಗುತ್ತದೆ ಅಂತಹ ಒಂದು ಹೀನಾಯ ಪರಿಸ್ಥಿತಿಯಲ್ಲಿವೆ. ಮಾನ್ಯ ಮುಖ್ಯಮಂತ್ರಿಗಳು ಅಲ್ಲಿಗೆ ಬಂದಿದ್ದಾಗ ಅಲ್ಲಿದ್ದಂತಹ ಪರಿಸ್ಥಿತಿಯನ್ನು ಸ್ವತಃ ಕಣ್ಣಾರೆ ನೋಡಿದ್ದಾರೆ. ಸರ್ಕಾರದ ಗಮನವನ್ನು ಸೆಳೆದಿದ್ದಾರೆ ಏನೂ ಆಗಲಿಲ್ಲ, ಆ ಹಳ್ಳಿಗಳು ಸ್ಥಳಾಂತರವಾಗುವ ಬಗ್ಗೆ ದಯವಿಟ್ಟು ಕಾರ್ಯಕ್ರಮವನ್ನು ತೆಗೆದುಕೊಳ್ಳಬೇಕೆಂದು ತಮ್ಮ ಮೂಲಕ ನಾನು ಮುಖ್ಯಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಹೆಚ್.ಡಿ. ದೇವೇಗೌಡ : ಮಾನ್ಯ ಅಧ್ಯಕ್ಷರೇ, ಒಂದು ವಿಷಯ ಚೀನಾದಿಂದ ಏನು ರೇಷ್ಮೆಯನ್ನು ಆಮದು ಮಾಡಿಕೊಳ್ಳುತ್ತಿದ್ದೇವೆ ಅದನ್ನು ರೈತರ ಹಿತದೃಷ್ಟಿಯಿಂದ ತಡೆಯಬೇಕೆಂದು ಈಗಾಗಲೇ ಪಾರ್ಲಿಮೆಂಟ್ ಸ್ಟ್ಯಾಂಡಿಂಗ್ ಕಮಿಟಿ ಇನ್ ಕಾಮರ್ಸ್‌ನಲ್ಲಿ ಚರ್ಚೆಯಾಗಿದೆ. ನಾನು ಆ ಸಮಿತಿಯ ಸದಸ್ಯನಾಗಿದ್ದೆ. ರಿಪೋರ್ಟ್ ಕೊಡುವುದಕ್ಕೆ